## ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಬೇಲೂರು..

**ಸಿ.ಮಿಸ್ ನಂ.: 625/2021**

| | | |
|---|---|---|
| ಹೆಸರು | ಹೇಮಾವತಿ | **ದಿ: 11-08-2022** |
| ಗಂಡನ ಹೆಸರು | ಯುವರಾಜ | |
| ವಯಸ್ಸು | 33 ವರ್ಷ | **ಪಿಡಬ್ಲ್ಯೂ: 1** |
| ಉದ್ಯೋಗ | ಕೂಲಿ | |
| ವಾಸ | ಚಿನ್ನೇನಹಳ್ಳಿ, ಬೇಲೂರು | **ವಿಧಿ ಬದ್ಧವಾಗಿ ಪ್ರಮಾಣೀಕರಿಸಲಾಯ್ತು** |

**ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಾದ ಶ್ರೀ ಕೆ ವಿ ಆರ್ ವಕೀಲರಿಂದ:**

ಎದುರುದಾರರು ನನ್ನ ಗಂಡನಾಗಬೇಕು. ನನ್ನ ಹಾಗೂ ಎದುರುದಾರರ ವಿವಾಹವು ದಿನಾಂಕ **24-04-2005** ರಂದು ಬೇಲೂರಿನ ಚೆನ್ನಕೇಶವ ಸ್ವಾಮಿ ದೇವಸ್ಥಾನದಲ್ಲಿ ನಮ್ಮ ಸಂಪ್ರದಾಯದಂತೆ ನಡೆದಿರುತ್ತದೆ. ಎದುರುದಾರರಿಗೆ ಒಂದು ಲಕ್ಷ ರೂಪಾಯಿ ವರದಕ್ಷಿಣೆ ಮತ್ತು **50** ಗ್ರಾಂ ನಷ್ಟ ಚಿನ್ನದ ಒಡವೆ ನೀಡಿರುತ್ತೇವೆ. ನನಗೆ ಇಬ್ಬರು ಮಕ್ಕಳು, **1** ಗಂಡು **1** ಹೆಣ್ಣು ಇರುತ್ತಾರೆ. ನಾನು ಮತ್ತು ಎದುರುದಾರರು ಮದುವೆಯಾಗಿ ಕೆಲವು ದಿನಗಳ ಕಾಲ ಮಾತ್ರ ಅನ್ಯೋನ್ಯವಾಗಿದ್ದೆವು. ಎದುರುದಾರರು ಯಾವುದೇ ಉದ್ಯೋಗ ಮಾಡದೇ ಕುಡಿತದ ಚಟ ಕಲಿತು ಇಸ್ಪಿಟ್ ಆಟ ಆಡುತ್ತಿದ್ದು ನಮ್ಮನ್ನು ಚೆನ್ನಾಗಿ ನೋಡಿಕೊಳ್ಳುತ್ತಿರಲ್ಲಿಲ್ಲ. ಕುಡಿದು ಬಂದು ನನಗೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಹಿಂಸೆ ನೀಡುತ್ತಿದ್ದರು. ಈಗ **7-8** ತಿಂಗಳುಗಳ ಹಿಂದೆ ನನ್ನ ಗಂಡ ನನ್ನನ್ನು ದೈಹಿಕವಾಗಿ ಹಲ್ಲೆ ಮಾಡಿ ಹೊಡೆದು ಮನೆಯಿಂದ ಹೊರ ಹಾಕಿರುತ್ತಾನೆ. ನಾನು ಆಸ್ಪತ್ರೆಯಲ್ಲಿ ಈ ಬಗ್ಗೆ ಚಿಕಿತ್ಸೆ ಪಡೆದಿರುತ್ತೇನೆ. ಈ ಬಗ್ಗೆ ನಾನು ಬೇಲೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲು ಮಾಡಿರುತ್ತೇನೆ.

**2.** ನಾನು ಅವಿದ್ಯವಂತಳಾಗಿದ್ದು ಈಗ ನನ್ನ ತಂದೆ-ತಾಯಿಯ ಜೊತೆ ಆಶ್ರಯ ಪಡೆದಿದ್ದು ತೋಟದಲ್ಲಿ ಕೆಲಸ ಮಾಡಿಕೊಂಡಿರುತ್ತೇನೆ. ನನಗೆ ಮಂಡಿ ನೋವು ಇದ್ದು ಕೂಲಿ ಕೆಲಸ ಮಾಡಲು ಸಾದ್ಯವಾಗುತ್ತಿರುವುದಿಲ್ಲ. ನನಗೆ ಊಟ, ವಸತಿ, ಆಸ್ಪತ್ರೆ ಖರ್ಚು ಇತ್ಯಾದಿಗಳಿಗೆ ತಿಂಗಳಿಗೆ **8** ರಿಂದ **10** ಸಾವಿರ ರೂಪಾಯಿ ಖರ್ಚು ಆಗುತ್ತಿರುತ್ತದ್ದೆ. ಎದುರುದಾರರ ಹೆಸರಿನಲ್ಲಿ ಪಿತ್ರಾರ್ಜಿತವಾದ ನನ್ನ ಮಾವನ ಹೆಸರಿನಲ್ಲಿರುವ **4** ಎಕರೆ ಹಾಗೂ ದರಕಾಸ್ತು ಮೂಲಕ ಬಂದಿರುವ **2** ಎಕರೆ ಜಮೀನುಗಳು ಇದ್ದು ಅದರಿಂದ ಎದುರುದಾರರಿಗೆ ತಿಂಗಳಿಗೆ **40-50** ಸಾವಿರ ರೂಪಾಯಿ ಆದಾಯ ಇರುತ್ತದೆ. ನನ್ನ ವಿರುದ್ಧ ಎದುರುದಾರರು ಯಾವುದೇ ದೂರು ನೀಡಿರುವುದಿಲ್ಲ. ಆದ ಕಾರಣ ನನಗೆ ತಿಂಗಳಿಗೆ **15** ಸಾವಿರ ರೂಪಾಯಿ ಖರ್ಚು ಇರುತ್ತದೆ. ಪ್ರಸ್ತುತ ನಾನು ಯಾವುದೇ ಕೆಲಸಕ್ಕೆ ಹೋಗುತ್ತಿಲ್ಲ, ಆದ

ಕಾರಣ ಎದುರುದಾರನಾದ ನನ್ನ ಗಂಡನ ನನಗೆ ಸದರಿ ಜೀವನಾಂಶ ಮೊತ್ತವನ್ನು ನೀಡಲು ಭಾದ್ಯನಾಗಿರುತ್ತಾನೆ. ಪ್ರಸ್ತುತ ನನ್ನ ಹೆಸರಿನಲ್ಲಿ ಇರುವ ಮನೆಯಲ್ಲಿ ಎದುರುದಾರರು ವಾಸವಿದ್ದು ನನಗೆ ವಾಸ ಮಾಡಲು ಬೇರೆ ಮನೆ ಇರುವುದಿಲ್ಲ.

ನಾನು ನ್ಯಾಯಾಲಯಕ್ಕೆ ಕೆಲವು ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಈ ಕೆಳಕಂಡಂತೆ ಕ್ರಮವಾಗಿ ಗುರುತಿಸಲಾಯಿತು.

| | | |
|---|---|---|
| ನಿಪಿ | **1** | ಸ.ನಂಃ **172** ರ **2021-22** ನೇ ಸಾಲಿನ ಪಹಣಿ ಪತ್ರಿಕೆ. |

ಎದುರುದಾರರ ಪರ ವಕೀಲರು ಪಾಟೀ ಸವಾಲಿಗಾಗಿ ಸಮಯ ಕೋರಿದ್ದರಿಂದ ನೀಡಲಾಯಿತು..

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೇ. ಸರಿ. ಇದೆ

(ಪ್ರಸನ್ನಕುಮಾರ್ ಸಿ.)
ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಬೇಲೂರು.